ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp.23-27
©*IIMRD*, Mysuru

IIMRD JOURNALS
www.iimrd.com

# ತ್ರಿವಿಧ ದಾಸೋಹ ಮತ್ತು ಶರಣರ ನಡೆ–ನುಡಿ

**ಡಾ. ಎಸ್. ಬಿ. ರಾಠೋಡ**

ಸಂಶೋಧನಾ ಸಹ ಪ್ರಾಧ್ಯಾಪಕರು, ಪ್ರಾಚಾರ್ಯರು ಮತ್ತು ಮುಖ್ಯಸ್ಥರು ಕನ್ನಡ ವಿಭಾಗ ಹಾಗೂ ಸಂಶೋಧನಾ ಮಾರ್ಗದರ್ಶಕರು (ಹಂಪಿ.ವಿ.ವಿ), ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ

**ಸಾರಾಂಶ: (Abstract)**

*"ರಾಜ್ಯ ಗಾಂಭಿರ್ಯ ತೊರೆದು ಪಂಡಿತವರ್ಗವನ್ನು ದಿಕ್ಕರಿಸಿ, ಸರಳ ಸಜ್ಜನಿಕೆಯ ಜೀವನ ಶೈಲಿಯನ್ನು ಹುಡುಕಿಕೊಂಡು, ನಡೆ–ನುಡಿಯಲ್ಲಿ ಒಂದಾಗಿ ಬದುಕಿದವರೆಂದರೆ ಶಿವಶರಣರು. ಇವರು ಬದುಕಿದಷ್ಟು ದಿನಗಳು ಕ್ರಾಂತಿಯ ಕಿಡಿಯಾಗಿ ಸಮಾಜದ ಎಲ್ಲ ವರ್ಗದ ಜನರಿಗೆ ನ್ಯಾಯ, ಅನ್ಯಾಯದ ಕುರಿತು ತಿಳಿಪಡಿಸಿದರು. ಜನರ ಬದುಕಿಗೆ ರಾಜರಾದರು; ಅಷ್ಟೇ ಅಲ್ಲದೆ ರಾಜರಂತೆ ಜನಸಾಮಾನ್ಯರನ್ನು ಬದುಕುವುದನ್ನು ಕಲಿಸಿದರು. ಶಿವಶರಣರು ಕಾಯಕ, ದಾಸೋಹ, ಪ್ರಸಾದ ಇವು ಇವರ ಮುಖ್ಯ ತಳಹದಿಗಳಾಗಿವೆ. ಕಾಯಕದಿಂದ ಬಂದ ಲಾಭ ದಾಸೋಹಕ್ಕೆ ಪರಿವರ್ತನೆ ಮಾಡಿ ಎಲ್ಲರಿಗೂ ಅನ್ನ ಬಾಗ್ಯದ ರುವಾರಿಗಳಾದರು. ಇದು ಅಲ್ಲದೇ ತನು, ಮನ, ಧನ ಎಲ್ಲವೂ ಸ್ವ ಸಂತೋಷದಿಂದ ಅರ್ಪಿಸಿದರು. ಬದುಕಿನ ಶ್ರಮವೆಲ್ಲ ಕಾಯಕವಾಗಿಸಿ, ಬದುಕೆಲ್ಲವೂ ದಾಸೋಹವಾಗಿಸಿ, ಬದುಕೇ ಪ್ರಸಾದವಾಗಿಸಿದ್ದು ವಚನಕಾರರು ಮಾಡಿದ ಅದ್ಬತ್ ಸಾಧನೆಗಳು ಈ ಸಂಶೋಧನಾ ಲೇಖನದಲ್ಲಿ ಅಡಗಿದ ಪ್ರಮುಖ ಅಂಶ"*

**ಮುಖ್ಯಪದಗಳು (Keywords):** ಶಿವಶರಣರು, ವಚನಕಾರರು, ವಚನ ಸಾಹಿತ್ಯ, ತ್ರಿವಿಧ ದಾಸೋಹ, ಕಾಯಕ, ಪ್ರಸಾದ.

**ಪೀಠಿಕೆ**

ಹನ್ನೆರಡನೆಯ ಶತಮಾನದಲ್ಲಿ ನಡೆ–ನುಡಿ, ಅಂತರಂಗ–ಬಹಿರಂಗ ಶುದ್ಧಿಗಳಂತೆ, ಕಾಯಕ, ದಾಸೋಹ, ಪ್ರಸಾದ ಇವು ಮೂರು ಅಮೂಲ್ಯವಾದ ತತ್ವಗಳಂತೆ ಪರಿಪಾಲಿಸಿದರು. ಈ ತತ್ವಗಳ ಕುರಿತು ಹೇಳುವುದಾದರೆ ಶರಣರ ವಚನಗಳನ್ನು ತಿರುವಿ ಹಾಕಬೇಕಾಗುತ್ತದೆ. ಬಸವಾದಿ ಪ್ರಥಮರು ಜಗತ್ತಿಗೆ ಕೊಟ್ಟ ಬಹು ದೊಡ್ಡ ಕೊಡುಗೆಯೆಂದರೆ ಈ ತತ್ವಗಳು. ಈ ಮೂರು ಒಂದನ್ನೊಂದು ಸರಪಳಿಯಂತೆ ಹೆಣೆದುಕೊಂಡಿವೆ. ಕಾಯಕದಿಂದ ಬಂದ ದ್ರವ್ಯವನ್ನು ಸಮಾಜಕ್ಕೆ ಅರ್ಪಿಸುವುದು ದಾಸೋಹವಾಗುತ್ತೆ. ಕಾಯಕವಿಲ್ಲದೆ ದಾಸೋಹವಿಲ್ಲ ದಾಸೋಹವಿಲ್ಲದೆ ಪ್ರಸಾದವಿಲ್ಲ ಹೀಗೆ ಕಾಯಕದ ತಳಹದಿಯ ಮೇಲೆ ದಾಸೋಹ, ಪ್ರಸಾದ ನಿಂತುಕೊಂಡಿದೆ.

*Please cite this article as:* ರಾಠೋಡ ಎಸ್. ಬಿ. (2024). ತ್ರಿವಿಧ ದಾಸೋಹ ಮತ್ತು ಶರಣರ ನಡೆ–ನುಡಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 23–27

ದಾಸೋಹವೆಂದರೆ ಹಸಿದು ಬಂದವರಿಗೆ ಹಿಡಿ ಅನ್ನ ನೀಡುವುದೆಂದು ತಿಳಿದುಕೊಳ್ಳುವುದು ತಪ್ಪು ಇದು ಕೇವಲ ಅನ್ನ ದಾಸೋಹವಾಗಬಹುದು. ದಾಸೋಹ ತತ್ವದ ವ್ಯಾಪ್ತಿಯು ಬಹಳ ವಿಶಾಲವಾಗಿದೆ. ನಾವು ಅದನ್ನು ಅನ್ನದಾಸೋಹಕ್ಕೆ ಮಾತ್ರ ಸಿಮಿತಗೊಳಿಸಿದರೆ, ದಾಸೋಹ ತತ್ವಕ್ಕೆ ಅಪಚಾರ ಮಾಡಿದಂತಾಗುತ್ತದೆ. ಪ್ರತಿಯೊಂದು ಜೀವಿಯಲ್ಲಿ ಶಿವಸ್ವರೂಪವನ್ನು ಕಂಡು ಅಹಂಕಾರಾದಿಗಳನ್ನು ಅಳಿದು, ಆತ್ಮ ಸಮರ್ಪಣಾ ಭಾವದಿಂದ ಸಮಾಜ ಸೇವೆಗೆ ತನು,ಮನ,ಧನಗಳನ್ನು ಮೀಸಲಾಗಿಡುವುದು ದಾಸೋಹವಾಗಿದೆ. ದೇವರಲ್ಲಿ ದೈವತ್ವ ಕಾಣುವದರ ಜೊತೆಗೆ ಮಾನವನಲ್ಲಿ ದೈವಿಕಭಾವವನ್ನು ಕಂಡು ಅವನನ್ನು ದೇವರ ಸ್ವರೂಪದಲ್ಲಿ ಗೌರವಿಸುವುದು ದಾಸೋಹವಾಗಿದೆ. ಮಾನವ ಸೇವೆಗೆ ಅದು ಹೆಚ್ಚು ಮಹತ್ವ ಕೊಡುತ್ತದೆ. ದಾಸೋಹದಲ್ಲಿ ಕಾಣುವ ಮುಖ್ಯ ಅಂಶವೆಂದರೆ ವಿನಮ್ರತೆ, ದೈನ್ಯತೆ, ತನ್ನತನವನ್ನುಸಂಪೂರ್ಣ ಬಿಟ್ಟುಕೊಡುವುದನ್ನು ನನ್ನದೆಂಬ ಅಹಂಕಾರವನ್ನು ನಾಶಪಡಿಸುವಿಕೆ ಅದು ನಿಜವಾದ ದಾಸೋಹವಾಗುತ್ತದೆ.

***"ಶಿವೋಹಂ ಎಂಬುದು ಬಹಿರಂಗದ ಮದ***
***ಸೋಹಂ ಎಂಬುದು ಅಂತರಂಗದ ಮದ"***

ಈ 'ಶಿವೋಹಂ' ಆಗಲಿ 'ಸೋಹಂ' ಆಗಲಿ ದಾಸೋಹಿಗೆ ಮಾರಕ ಅದಕ್ಕೆ ಇವೆರಡನ್ನು ಬಿಟ್ಟು 'ದಾಸೋಹಂ' ಎಂದೆನಿಸಯ್ಯಾ ಎಂಬುವುದು ಬಸವಣ್ಣನವರ ವಿಚಾರವಾಗಿದೆ. ಹೀಗೆ ವಿನಮ್ರ ಭಾವನೆಯಿಂದ ಬದುಕುತ್ತಿರವ ಶರಣರು ದಾಸೋಹಕ್ಕಾಗಿ ಸರ್ವಸ್ವ ತ್ಯಾಗಮಾಡಿರುವುದು ಕಾಣುತ್ತೇವೆ. ಶರಣರು ಮಾಡಿದೆಲ್ಲವೂ ಕಾಯಕವಾಯಿತು, ನೀಡಿದ್ದೆಲವೂ ದಾಸೋಹವಾಯಿತು. ಪಡೆದೆದೆಲ್ಲವೂ ಪ್ರಸಾದವಾಯಿತು. ಈ ಮಾಡುವ, ನೀಡುವ, ಪಡೆಯುವ ಪರಿಕರವೇ ಅವರ ಆತ್ಮಶುದ್ಧಿಗೆ ಬೃಹತ್ ಮಾರ್ಗವಾಯಿತು.

**ದಾಸೋಹ ಪದದ ಅರ್ಥ ಮತ್ತು ಮೂಲ**

ದಾಸೋಹ ಎಂಬ ಪದವು ಮೂಲತಃ ಸಂಸ್ಕೃತದಿಂದ ಬಂದ ಪದ. ಸಂಸ್ಕೃತದಲ್ಲಿ ದಾಸೋಹಂ ಎಂದರೆ ದಾಸಃ ಅಹಂ ಎಂಬುದರಿಂದಾದುದು. ನಾನು ದಾಸನಿದ್ದೇನೆ ಎಂಬುವುದು ಇದರ ಅರ್ಥ. ದೇವರಿಗೆ ಅಥವಾ ಒಬ್ಬ ವ್ಯಕ್ತಿಗೆ ತಾನು ಸೇವಕನೆಂಬ ಭಾವ ಇಲ್ಲಿ ಹೇಳುತ್ತದೆ. ಸಿದ್ದರಾಮದೇವರು ದಾಸೋಹದ ತಾತ್ವಿಕ ಅರ್ಥವನ್ನು ನಿರ್ಣಯಿಸಿದ್ದು ಹೀಗಿದೆ. "ದಾಸೋಹಂ ಎಂಬುದು ಅಂತರಂಗದ ಮದ ನೋಡಯ್ಯ, ಶಿವೋಹಂ ಎಂಬುದು ಬಹಿರಂಗದ ಮದ ನೋಡಯ್ಯ. ಈ ದ್ವಂದ್ವನಳಿದು ದಾಸೋಹಂ ಎಂದೆನಿಸಯ್ಯ" ಇಲ್ಲಿ ಅಹಂಭಾವಗಳು ಎರಡು ರೀತಿಯಿಂದ ಗೋಚರಿಸುತ್ತವೆ. ಒಂದು ಅಂತರಂಗದ 'ಅಹಂಭಾವ' ಇನ್ನೊಂದು ಬಹಿರಂಗದ ಅಹಂಭಾವ ಇವು ಎರಡನ್ನು ಅಳಿಸುವುದೆ ದಾಸೋಹ ಎನ್ನುತ್ತಾರೆ. ನುಲಿಯ ಚಂದಯ್ಯನವರು ಹೇಳುವ ರೀತಿ ಈ ವಚನದಲ್ಲಿದೆ. *"ತನು ಕರಗಿ, ಮನ ಬಳಲಿ, ಬಂದ ತೆರದನುವನಂದು ಸಮದಿಲ್ಲದೆ ಸಂಶಯವಿಲ್ಲದೆ, ದಾಸೋಹವ ಮಾಡುವುದೇ ಮಾಟ"* ಇಲ್ಲಿ ದಾಸೋಹವೆಂಬುವುದು ಮಾಟವೆಂದು ಅರ್ಥವನ್ನು ನೀಡತ್ತದೆ. ಅಹಂಕಾರ ಮತ್ತು ಮಮಕಾರಗಳಿಲ್ಲದವನು ಲಿಂಗಕ್ಕೆಂದು ಮಾಡುವುದು ಮಾಟ. ಲಿಂಗವಾಗಿ ಲಿಂಗಕ್ಕೆ ಮಾಡುವುದು ಮಾಟ. ಈ ಮಾಟವು ಲಿಂಗದ ಮೂರು ರೂಪುಗಳಿಗೆ ಮಾಡಬೇಕಾದುದು. ಆ ಮೂರು ರೂಪುಗಳೆಂದರೆ ಗುರು, ಲಿಂಗ ಮತ್ತು ಜಂಗಮ,

ಶಿವಶರಣರನ್ನು ತನ್ನವೆಂಬ ಮೂರನ್ನು ತನು, ಮನ, ಧನ ಅನುಕ್ರಮವಾಗಿ ಗುರು, ಲಿಂಗ, ಜಂಗಮಗಳಿಗೆ ಕೊಡುವುದು ಮಾಟ. ಈ ಕಾರ್ಯವೇ ದಾಸೋಹ.

'ಜನ್ಮಜನ್ಮಕ್ಕೆ ಹೋಗಲಿದೆಯೇ, 'ಸೋಹಂ' ಎಂದೆನಿಸದೆ, ದಾಸೋಹಂ' ಎಂದೆನಿಸಯ್ಯಾ. ಲಿಂಗ ಜಂಗಮದ ಪ್ರಸಾದವ ತೋರಿ ಬದುಕಿಸಯ್ಯಾ ಕೂಡಲಸಂಗಮದೇವ' 'ಸೋಹಂ' ಅನ್ನುವಂತಹ ಭಾವ ನನ್ನಲ್ಲಿ ಅಳಿಸಿ ಹೋಗಬೇಕು 'ದಾಸೋಹಂ' ಅನ್ನುವಂತಹ ಭಾವ ನನ್ನ ಹೃದಯ ಮಂದಿರದಲ್ಲಿ ಅರಳಬೇಕು. 'ದಾಸೋಹಂ' ಗುರು, ಲಿಂಗ, ಜಂಗಮರಿಗೆ ಪ್ರಸಾದವಾಗಿ ಮಾರ್ಪಡಬೇಕು. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಯರಿಲ್ಲ ನಿಮ್ಮ ಸಾಕ್ಷಿ ಎನ್ನ ಮನ ಸಾಕ್ಷಿ' ಶಿವಭಕ್ತಿಯಲ್ಲಿ, ವೃತ್ತಿಯಲ್ಲಿ ಎಷ್ಟೆ ದೊಡ್ಡವನಾದರೂ ನಾನು ಎಲ್ಲರಲ್ಲಿ ಕಿರಿಯವನು ಅತೀ ಹಿರಿತನದ ಸ್ಥಾನ ಅಂದರೆ ಶಿವಭಕ್ತರ ಸ್ಥಾನ ಇದಕ್ಕೆ ನಿಮ್ಮ ಮನ ಸಾಕ್ಷಿ ಅಷ್ಟೇ ಅಲ್ಲ ನನ್ನ ಮನ ಸಾಕ್ಷಿ ಎಂಬ ಹಂಬಲ ಬಸವಣ್ಣನವರದು. 'ಈಶ, ನಿಮ್ಮ ದಾಸರ ದಾಸಿಯ ದಾಸ ನಾನಯ್ಯ ನಿಮ್ಮ ವೇಷದಾರಿಯ ಮನೆಯ ಪಂಗುಳ ನಾನಯ್ಯಾ' ನಿಮ್ಮ ಲಾಂಛನವನ್ನು ಧರಿಸಿಕೊಂಡ ದಾಸರ ದಾಸಿಯ ಮಗ ನಾನು. ನಿಮ್ಮ ವೇಷದಾರಿಯ ಮನೆಯ ಕಾವಲುಗಾರ ನಾನು ಎಲ್ಲಿಯೂ ಅಹಂ, ಅಹಂಕಾರ ತೋರದೆ ಮುಗ್ದವಾಗಿ ಶಿವಭಕ್ತಿಯ ಅಂತರಮಗದ ಮೈಹಿಮೆಯಲ್ಲಿ ಬದುಕುವ ಆಶೆಯೇ ಕಾಣುತ್ತೇವೆ. ಶ್ರೀ ಮಹಾದೇವನನ್ನು ನೆನೆಯುತ್ತಾ ನಾನು ಬೇರಾರು ಅಲ್ಲ ದೇವಾ ನಿನ್ನ ಪಾದರಕ್ಷೆಯನ್ನು ಕಾಯ್ದಿಕೊಂಡು ಬದುಕುವೆ ಬಡವಾ ನಾನು ವೆಂದು ಹೋಗಳು ಮಾತು ದೇವರಿಗೆ ಅರ್ಪಿತ.

ಆಡಿದಡೇನು, ಹಾಡಿದಡೇನು, ಓದಿದಡೇನು, ತ್ರಿವಿಧ ದಾಸೋಃವಿಲ್ಲದನ್ನಕ್ಕ? ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ? ಭಕ್ತಿಯಿಲ್ಲದವರನೊಲ್ಲ' ಕುಣಿಯುವ ನವಿಲಿನಲ್ಲಿ ಕುಣಿತದ ಅಂಗಭಂಗಿಗಳು ಬೇಕು ಅಂದರೆ ಅದು ನಿಜವಾದ ಕುಣಿತದ ಆಟವಾಗುತ್ತದೆ. ತಂತಿಯನ್ನು ಮಿಟಿದ ಕೂಡಲೆ ಮನಮೋಹಕವಾದ ಸ್ವರ ಹೊರ ಚೆಲ್ಲಬೇಕು, ಅದು ಮನ ಗೆಲ್ಲಬೇಕು. ಗಿಳಿ ಪಾಠ ಅಂದರೆ ಬರಿ ಪಠವಾಗಿಯೇ ಉಳಿಯಬಾರದು ಅದು ಆಡುಮಾತುಗಳು ಹಿತವಾಗಿ ಶಿವ ಅರ್ಪಿತವಾಗಬೇಕು. ಇವು ಮೂರು ಒಂದನೊಂದು ಹೊಂದಾಣಿಕೆ ವಿಲ್ಲದ್ದಿದ್ದರೆ ಕೂಡಲಸಂಗಮದೇವನಿಗೆ ಅರ್ಪಿತವಾಗದು. 'ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ' ಅರಮನೆಯಲ್ಲಿ ಅರಸನ ಒಡತಿಯಾಗಿರುವುದಕ್ಕಿಂತ ಭಕ್ತರ ಮನೆಯಲ್ಲಿ ಕೂಲಿ ಕೆಲಸ ಮಾಡುತ್ತಾ ಇರುವುದು ಲೇಸು ಅನ್ನುತಾರೆ. 'ಅಯ್ಯಾ ನಿಮ್ಮ ಶರಣರ ದಾಸೋಹಕ್ಕೆ ಎನ್ನ ತನು ಮನ ಧನವಲಸದಂತೆ ಮಾಡಯ್ಯಾ' ತನು ದಾಸೋಹಕ್ಕೆ ಒಪ್ಪುವಂತೆ ಮಾಡು, ಮನ ದಾಸೋಹದಲ್ಲಿ ಅಡಗುವಂತೆ ಮಾಡು, ಧನ ದಾಸೋಹಕ್ಕೆ ಅರ್ಪಿಸುವಂತೆ ಮಾಡು, ಶರಣರಿಗೆ ಪ್ರಸಾದವಾಗುವಂತೆ ನಿರಂತರ ಆಡಿ, ಹಾಡಿ, ನೋಡಿ, ಕೂಡಿ ಭಾವಿಸಿ, ಸಂತೋಷ ಪಡುವಂತೆ ಮಾಡುವುದೆ ನಿಜವಾದ ದಾಸೋಹವಯ್ಯಾ.

'ಅಯ್ಯಾ, ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ; ಆತನ ತೊತ್ತಿನ ಮಗ ನಾನಯ್ಯಾ, ಬಳಿದೊತ್ತು, ಬಳಗ ದೊತ್ತು ವಂಶದೊತ್ತು ನಾನಯ್ಯಾ ಕೂಡಲಸಂಗಮದೇವಾ' ನಾನು ಯಾರು? ನಾನು ಯಾವ ಕುಲದಲ್ಲಿ ಹುಟ್ಟಿದ್ದೇನೆ ಎಂಬ ಅಂಹಕಾರವಿಲ್ಲ. ನಿಮ್ಮ ವಂಶವಾಹಿನಿಯಲ್ಲಿ ಒಬ್ಬ ಮಗನಾಗಿ ಹುಟ್ಟಿದ್ದಿನಿ. ಇಲ್ಲಿ ನಿಮ್ಮ ಮನೆಯ ದಾಸಿಯ ಮಗನಾಗಿ ಹುಟ್ಟಿದ್ದಿನಿ, ನನ್ನ ಕುಲ, ಮತ, ಧರ್ಮ ನಿಮ್ಮ

ವಂಶಾವಳಿಯಲ್ಲಿ ಅಡಗಿದ. ನನಗೆ ಯಾವ ಒಡೆತನವು ಅವಶ್ಯಕತೆವಿಲ್ಲ. 'ಚನ್ನಯ್ಯನ ಮನೆಯ ದಾಸನ ಮಗನು; ಕಕ್ಕಯ್ಯನ ಮನೆಯ ದಾಸಿಯಯ ಮಗಳು, ಇವರಿಬ್ಬರು ಹೊಲದಲ್ಲ ಬೆರಣೆಗೆ ಹೋಗಿ ಸಂಗವ ಮಾಡಿದ ಫಲದ ಮಗ ನಾನು' ಸಮಜದಲ್ಲಿ ಮೇಲು–ಕೀಳು ಎಂಬ ಭ್ರಮೆಯಲ್ಲಿ ಇರುವ ಜನತೆಗೆ ಒಂದು ಅದ್ಭುತವಾದ ಸಂದೇಶ ಈ ವಚನ. ಕುಲ, ಧರ್ಮ, ಜಾತಿ, ಮತ, ಪಂಥಗಳು ಹನ್ನೆರಡನೆಯ ಶತಮಾನದಲ್ಲಿ ಶ್ರೇಷ್ಠ ಮಟ್ಟದಲ್ಲಿದ್ದವು. ಹೀನಕುಲ, ಕೆಳಜಾತಿ, ಧರ್ಮ ವಂಚಿತದಿಂದ ನರಕಯಾತನೆ ಅನುಭವಿಸುತ್ತಿರುವ ಜನರಿಗೆ ಮುನೋಬಲ ತುಂಬಿದರು. ದಾಸನ ಮಗ, ದಾಸಿಯ ಮಗಳು ಹೊಲದಲ್ಲಿ ಬೆರಣೆ ಹೋಗಿದ್ದ ಸಂದರ್ಭದಲ್ಲಿ ಒಬ್ಬರನೊಬ್ಬರು ಮನ ಸೋತು ಪ್ರೀತಿ ಪ್ರೇಮದಲ್ಲಿ ಜಾರಿ, ಮದುವೆ ಎಂಬ ಬಂಧನದಿಂದ ದೂರವಿದ್ದು ಅವರ ಪ್ರೀತಿ ಪ್ರೇಮದ ಕಾಣಿಕೆಯಾಗಿ ನಾ ಹುಟ್ಟಿ ಬಂದೆ ಇದಕ್ಕೆ ಕೂಡಲಸಂಗಮದೇವ ಸಾಕ್ಷಿ. ಎಂಬ ವಿಚಾರ ಹನ್ನೆರಡನೆಯ ಶತಮಾನ ಅಷ್ಟೆ ಅಲ್ಲ ಇಡಿ ಮನುಕುಲಕ್ಕೆ ಸಂದೇಶವಾಗಿದೆ.

'ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆನಯ್ಯಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ. ಶರಣರು ಯಾವ ಪದವಿಗಗಿ ಹೋರಾಟ ಮಾಡಲಿಲ್ಲ, ಸಮಜದ ಸಮತೊಲನ ಕಾಯುವ ಮತ್ತು ಸಮಾಜದಲ್ಲಿ ನಡೆಯುವ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸುವ ಸಲುವಾಗಿ ಹಗಲಿರುಳು ದುಡಿದರು, ಮಡಿದರು. ಬ್ರಹ್ಮ, ವಿಷ್ಣು, ರುದ್ರ ಪದವಿಗಳನ್ನೆ ಅಲ್ಲಗಳೆದರು ಅಷ್ಟೆಲ್ಲ ಇನ್ನೂ ಹೆಚ್ಚಿನ ಪದವಿ ಇದ್ದರೂ ಬೇಡ ಎಂದು ಪ್ರೀತಿಯಿಂದ ದೂರ ಸರಿದರು. ನಗೆ ದೊಡ್ಡ ಪದವಿ ಅಂದರೆ ಸದ್ಭಕ್ತರ ಪಾದಸ್ಪರ್ಶದ ಸೇವೆಯೇ ಹಿರಿದಾದ ಪದವಿಯೆಂದು ತಿಳಿದು ಬದುಕಿದವರು.

'ನೀನಿಕ್ಕಿದ ಬೀಯದಲ್ಲಿ ವಂಚನೆಯುಳ್ಳಡೆ ಸಂಗಾ, ನಿಮ್ಮ ತೊತ್ತು ತನಕ್ಕೆ ದೂರವಯ್ಯಾ ಕದ್ದು ತಂದಡೆ ಕೈ ಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯಾ. ಜಂಗಮ ಮನಗೆ ಬಂದಲ್ಲಿ ಓಸರಿದಡೆ ಹಿಡಿದು ಮೂಗು ಕೊಯ್ಯಯ್ಯಾ' 'ಕೊಡಿಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ' ಅನ್ನುವಂತೆ ಶರಣರು ಎಲ್ಲಿಯೂ ಬಚ್ಚಿಡುವ ಕೆಲಸ ಮಾಡಲಿಲ್ಲ, ಕೊಟ್ಟಿದ್ದರಲ್ಲಿ ಉಳಿಸಿಕೊಳ್ಳುವ ಹಂಬಲವೂ ಆಗಲಿಲ್ಲ, ಮತ್ತೊಬ್ಬರ ಮನೆಯಲ್ಲಿ ಕಳ್ಳತನ ಮಾಡಬೇಕೆಂಬ ವಿಚಾರವು ಮನಸ್ಸಿನಲ್ಲಿ ಸುಳಿಯಲಿಲ್ಲ. ಒಂದು ವೇಳೆ ಕದ್ದು ತಂದ್ದಿದ್ದರೆ ಆ ಹುಚ್ಚುತನ, ಆ ತುಡುಗುತನ ಬಿಡಿಸಿ ನನ್ನ ಮನ ಪರಿವರ್ತನೆ ಮಾಡೆಂದು ತನ್ನ ಆರಾಧ್ಯ ದೈವನಲ್ಲಿ ಕೇಳಿಕೊಳ್ಳುವ ಪರಿ ಅದ್ಭುತ. ಅಷ್ಟೇ ಅಲ್ಲದೆ ಮನೆಗೆ ಬಂದ ಜಂಗಮನನ್ನು ಊಟೋಪಚಾರ ಮಾಡಿಸಿದ್ದಿದ್ದರೆ ನನ್ನ ಮೂಗು ಕೊಯ್ಯು ಎಂದು ಹೇಳವ ಪರಿ ದೇವರಿಗರ್ಪಿತ. ನಡೆ, ನುಡಿ, ಮಾಡುವ ಕೆಲಸ ಕಾರ್ಯದಲ್ಲಿ ಎಲ್ಲಿಯೂ ತಪ್ಪಿ ನಡೆಯಬಾರದು, ನಡೆದರೆ ನನ್ನ ದಂಡಿಸು ಎಂದು ಕೂಡಲಸಂಗಮದೇವವನ್ನು ಪರಿ ಪರಿಯಾಗಿ ಬೇಡಿಕೊಳ್ಳುವ ಹಂಬಲ ಈ ವಚನದಲ್ಲಿ ಅಡಗಿದೆ. 'ಕಾಯಕವೇ ಕೈಲಾಸ' ಎಂಬ ತತ್ವದಲ್ಲಿ ನಂಬಿಕೆ, ಶ್ರದ್ದೆಯುಳ್ಳ ಶರಣರು ಯಾರಿಗೂ ಮೋಸ, ವಂಚನೆ, ದ್ರೋಹ ಕಪಟತನ ಪ್ರದರ್ಶಿಸುವ ವಿಚಾರ ಅವರ ಹತ್ತಿರ ಸುಳಿಯಲಿಲ್ಲ. ಒಂದು ವೇಳೆ ಚಿತ್ತ ಅಲೆದಾಡಿದರೆ ನಮಗೆ ತಿದ್ದಿ ಬುದ್ದಿ ಹೇಳುದೇವಾ ಎಂದು ಬೇಡಿಕೊಳ್ಳವ ಪರಿ ಅದ್ಭುತ.

'ದಾಸಿಯ ಮಾರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ, ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ ಕಾಲ ಮುಟ್ಟಲಮ್ಮವು, ಕಲ್ಪಿತ ತೊಡೆಯಿತ್ತು' ಎನ್ನ ಭವಬಂಧನ ಹಿಂಗಿತ್ತು, ಕರ್ಮ ನಿರ್ಮಳವಾಯಿತ್ತು' ಶರಣರ ಸನ್ನಿಧಿ ಚಂದನದ ಸನ್ನಿಧಿಯಂತೆ, ಚಂದನದ ಪ್ರಭಾವಕ್ಕೆ ಒಳಗಾದ ಬೇವು ಬೊಬ್ಬುಳಿಗಳೂ ಸುಗಂಧಿತವಾಗುವಂತೆ, ಶರಣರ ಸಂಗಕ್ಕೆ ಸೇರಿದವರ ಕರ್ಮವು ನಿರ್ಮಲವಾಗುತ್ತದೆ ಮತ್ತು ಸದ್ಧರ್ಮವಾಗುತ್ತದೆ. 'ಪಂಡಿತನಾಗಲಿ ಮುರ್ಖನಾಗಲಿ ಸಂಚಿತ ಕರ್ಮ ಉಂಡಲ್ಲದೆ ಬಿಡದು ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಹೋಗದೆಂದು ಶೃತಿ ಸಾರುತ್ತೈತೆ ನೋಡಾ' ವ್ಯಕ್ತಿ ಲಬ್ಧ ಉಪಾಯವೊಂದಿವೆ. ಅದೇ ಆತ್ಮ ನೈವಧ್ಯ ಮಾಡಿ ನಿರ್ಬದ್ಯನಾಗುವುದು. ಶುದ್ಧನಾಗುವ, ಸಿದ್ಧನಾಗುವ ಉಪಾಯ ಹಿಮದಣ ಜನ್ಮದ ದಂದುಗವನನು ಬಿಡು ಈ ಜನ್ಮವನ್ನು ನಂಬಿ ಹಿಡಿ. ಹಿಂದೆ ನೀನೇನಗಾಗಿ ಹುಟ್ಟಿದ್ದೆ ಯಾವ ಯಾವ ಕರ್ಮ ಮಾಡಿದ್ದೆಯೆಂಬುದು ಮುಖ್ಯವಲ್ಲ. ಅದು ಮುಗಿದ ಅಧ್ಯಾಯ. ಈ ಜನ್ಮದಲ್ಲಿ ಏನು ಮಾಡುತಿಯೆಂಬುದು ಮುಖ್ಯ. ಇಂತಹ ಗರ್ವಪಡದ ದಾಸೋಹ ಪದ್ಧತಿಯು ಮತಮಾನ್ಯಗಳಲ್ಲಿ ಹಿಂದಿನಿಂದ ಇಂದಿನವರೆಗೂ ಉಳಿಸಿಕೊಂಡು ಬಂದಿರುವ ಬಹು ದೊಡ್ಡ ಸಂಸ್ಕೃತಿ. ಇದು ಭಾರತಿಯ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಾಗಿದೆ.

ಉಪಸಂಹಾರ

ಒಟ್ಟಿನಲ್ಲಿ ಬಸವಣ್ಣನವರು ಮಾಡಿದ ಅನೇಕ ಸಾಮಾಜೀಕ ಸುಧಾರಣೆಗಳಲ್ಲಿ ಕಾಯಕ ತತ್ವದೊಂದಿಗೆ ದಾಸೋಹ ತತ್ವವು ಅತ್ಯಂತಹ ಮಹತ್ವದ ಸ್ಥಾನ ಪಡೆದುಕೊಂಡಿದೆ. ಶರಣರು ಕೊಟ್ಟಿದ್ದನ್ನು ಕೆಟ್ಟದ್ದು ಎಂದು ಹೇಳಲಿಲ್ಲ. ಶರಣರ ಮಧ್ಯದಲ್ಲಿದ್ದು ಅವರಿಂದಲೇ ಪಡೆದೆ ಎಂಬುವುದು ಅವರ ವಿನಮ್ರತೆ. ತನಗಿಂತಲೂ ಎಲ್ಲರೂ ಹಿರಿಯರು ಅವರಲ್ಲಿ ತಾನೊಬ್ಬ ಕಿರಿಯ ಎನ್ನುತ್ತ, ಬಸವಣ್ಣನವರು ಎಲ್ಲದರಲೂ ಹಿರಿಯ ಸ್ಥಾನ ಪಡೆದುಕೊಂಡಿದ್ದು ಅವರು ಮಾಡಿದ ಸಾಧನೆಯಿಂದಲೇ ತಿಳಿದು ಬರುತ್ತದೆ. ಬಸವಣ್ಣನವರು ತಮ್ಮದೆಲ್ಲವನ್ನು ಅಂದರೆ ತನು, ಮನ, ಧನ, ಸರ್ವಶರಣರಿಗೆ ಅರ್ಪಿಸಿದರು. ತಮ್ಮ ಬದುಕಿನ ಶ್ರಮವೆಲ್ಲ ಕಾಯಕವಾಗಿ, ಬದುಕೆಲ್ಲವೂ ದಾಸೋಹವಾಗಿ, ಬದುಕೇ ಪ್ರಸಾದವಾಗಿ ಪಡೆದವರು. ಹೀಗೆ ಬಸವಣ್ಣನವರ ದಾಸೋಹ ತತ್ವ ವಿಶ್ವಮಾನ್ಯವಾದುದು, ನೂತನವಾದದ್ದು ಎಂದು ಹೆಳುವುದು ಹೆಮ್ಮೆಯೆನಿಸುತ್ತದೆ.

**ಪರಾಮರ್ಶ ಗ್ರಂಥಗಳು**


- ಮುದ್ದೇಬಿಹಾಳ, ಆರ್.ಸಿ. *ಶಿವಶರಣೆಯರ ಚರಿತಾಮೃತ.* ಕನ್ನಡ ಸಾಹಿತ್ಯ ಪರಿಷತ್ತು.
- ತಿಪ್ಪೆರುದ್ರಸ್ವಾಮಿ, ಎಚ್. *ಶರಣರ ಅನುಭಾವ ಸಾಹಿತ್ಯ.* ಡಿ.ವಿ.ಕೆ. ಮೂರ್ತಿ
- ತಿಪ್ಪೆರುದ್ರಸ್ವಾಮಿ, ಎಚ್, *ವಚನಗಳಲ್ಲಿ ವೀರಶೈವಧರ್ಮ.* ಡಿ.ವಿ.ಕೆ. ಮೂರ್ತಿ
- ರಾಯಚೂರ ಶಾಂತರಸ. *ಕಾಯಕ ಪರಿಣಾಮಿ ಚೆನ್ನಬಸವ ಪಟ್ಟದೇವರು.* ಗುಲಬುರ್ಗಾ
- ಶಿವಮೂರ್ತಿ ಶಾಸ್ತ್ರಿ, ಬಿ. *ವೀರಶೈವ ಸಾಹಿತ್ಯ.* ಬೆಂಗಳೂರು